**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಳೆನರಸೀಪುರ**

**OS No**:22/2016 **PW**-3

| | |
|---|---|
| ಹೆಸರು | **ವರಲಕ್ಷ್ಮೀ** |
| ಗಂಡನ ಹೆಸರು | **ಅನಂತರಾಜು** |
| ವಯಸ್ಸು | **41 ವರ್ಷ** |
| ಉದ್ಯೋಗ | ಪಿ.ಡಿ.ಓ. ಕ್ಯಾತನಹಳ್ಳಿ ಗ್ರಾಮ ಪಂಚಾಯಿತಿ |
| ವಾಸಸ್ಥಳ | **ಕ್ಯಾತನಹಳ್ಳಿ ಗ್ರಾಮ** |

ದಿನಾಂಕಃ 19.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ ರವರಿಂದಃ-**

ನಾನು 2019 ರಿಂದ ನಾನು ಕ್ಯಾತನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಪಿ ಡಿ ಓ ಆಗಿ ಕೆಲಸ ನಿರ್ವಹಿಸುತ್ತಿದ್ದೇನೆ.

ಕ್ಯಾತನಹಳ್ಳಿ ಗ್ರಾಮ ಪಂಚಾಯಿತಿಗೆ ಒಳಪಟ್ಟ ಖಾತಾ ನಂ.34 ಇ-ಸ್ವತ್ತಾಗಿದೆ, ಖಾತಾ ನಂ.35 ಇನ್ನೂ ಇ-ಸ್ವತ್ತು ಆಗಿಲ್ಲ. ಖಾತಾ ನಂ.34 ಮತ್ತು 35 ಕ್ಕೆ ಸಂಬಂದಪಟ್ಟಂತೆ ಖಾತೆ ವರ್ಗಾವಣೆಗೆ ಸಂಬಂಧಿಸಿದ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬೇಕೆಂದು ಮಾನ್ಯ ನ್ಯಾಯಾಲಯದಿಂದ ಆದೇಶವಾಗಿದ್ದು, ಆ ಪ್ರಕಾರ ನಾನು ಅರ್ಜಿ, ಖಾತಾ ನಕಲು, ಹಕ್ಕು ಖುಲಾಸೆ

ಪತ್ರ ರೇಷನ್ ಕಾರ್ಡ್, ವಿದ್ಯುತ್ ಬಿಲ್, ಆಧಾರ ಕಾರ್ಡ್, ಕಂದಾಯ ರಶೀದಿ ಮತ್ತು ಇ-ಸ್ವತ್ತಿನ ಪ್ರತಿಯನ್ನು ಹಾಜರುಪಡಿಸುತ್ತಿದ್ದೇನೆ. ಸಾಕ್ಷಿ ದಾಖಲಾತಿಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಈ ಕೆಳಗಿನಂತೆ ನಿಶಾನೆಗೊಳಿಸಲಾಯಿತು.

ಅರ್ಜಿಯ ದೃಢೀಕೃತ ನಕಲನ್ನು ನಿಪಿ 33 ಎಂದು, ಕಂದಾಯ ರಶಿದಿಯ ದೃಢೀಕೃತ ನಕಲನ್ನು ನಿಪಿ.34 ಎಂದು, ಫೋಟೋದ ದೃಢೀಕೃತ ನಕಲನ್ನು ನಿಪಿ.35 ಎಂದು, ಆಧಾರ ಕರ್ಡಿನ ದೃಢೀಕೃತ ನಕಲನ್ನು ನಿಪಿ.36, ರೇಷನ್ ಕಾರ್ಡಿನ ದೃಢೀಕೃತ ನಕಲನ್ನು ನಿಪಿ.37 ಎಂದು, ಹಕ್ಕು ಖುಲಾಸೆ ಪತ್ರದ ದೃಢೀಕೃತ ನಕಲನ್ನು ನಿಪಿ.38 ಎಂದು, ಸ್ವೀಕೃತಿ ನಿಪಿ.39 ಎಂದು, ಇ-ಸ್ವತ್ತಿನ ದೃಢೀಕೃತ ನಕಲನ್ನು ನಿಪಿ.40 ಎಂದು, ಕರ ನಿರ್ಧರಣಾ ಪತ್ರದ ದೃಢೀಕೃತ ನಕಲನ್ನು ನಿಪಿ.41 ಎಂದು, 2 ಡಿಮ್ಯಾಂಡ್ ರಿಜಿಸ್ಟರ್ ನ ದೃಢೀಕೃತ ನಕಲಗಳನ್ನು ಕ್ರಮವಾಗಿ ನಿಪಿ.42 ಮತ್ತು 43 ಎಂದು ಗುರುತಿಸಲಾಯಿತು.

ಈ ಮೇಲೆ ಹೇಳಿದ ದಾಖಲಾತಿಗಳೆಲ್ಲವೂ ಖಾತಾ ನಂ.34 ಕ್ಕೆ ಸಂಬಂಧಪಟ್ಟದ್ದಾಗಿರುತ್ತವೆ.

ಖಾತಾ ನಂ.35 ಇ-ಸ್ವತ್ತು ಆಗಿಲ್ಲ. ಖಾತಾ ನಂ.35 ಕ್ಕೆ ಸಂಬಂಧಪಟ್ಟಂತೆ ನಾನು ಡಿಮ್ಯಾಂಡ್ ರಿಜಿಸ್ಟರ್ ನ ಪ್ರತಿ, ಕೆ.ವಿ.ಮಂಜುನಾಥ್ ರವರ ಮರಣ ಪ್ರಮಾಣ ಪತ್ರ, ಮ್ಯುಟೇಶನ್ ಹಾಗೂ ಆರ್ ಟಿ ಸಿ ಪಹಣಿಯನ್ನು ಹಾಜರುಪಡಿಸುತ್ತಿದ್ದೇನೆ. ಸಾಕ್ಷಿ ದಾಖಲಾತಿಗಳನ್ನು ನೋಡಿ ಗುರುತಿಸಿದ್ದರಿಂದ ಈ ಕೆಳಗಿನಂತೆ ನಿಶಾನೆಗೊಳಿಸಲಾಯಿತು.

ಕರ ನಿರ್ಧರಣಾ ಪತ್ರದ ದೃಢೀಕೃತ ನಕಲನ್ನು ನಿಪಿ.44 ಎಂದು, 2 ಡಿಮ್ಯಾಂಡ್ ರಿಜಿಸ್ಟರ್ ನ ದೃಢೀಕೃತ ನಕಲುಗಳನ್ನು ಕ್ರಮವಾಗಿ ನಿಪಿ.45 ಮತ್ತು 46 ಎಂದು, ಮರಣ ಪ್ರಮಾಣ ಪತ್ರವನ್ನು ನಿಪಿ.47 ಎಂದು, ಎಂ ಆರ್ ನಂ.ಹೆಚ್.19ರ ದೃಢೀಕೃತ ನಕಲನ್ನು ನಿಪಿ.48 ಎಂದು, ಆರ್ ಟಿ ಸಿ ಪಹಣಿಯ ದೃಢೀಕೃತ ನಕಲನ್ನು ನಿಪಿ.49 ಎಂದು ಗುರುತಿಸಲಾಯಿತು.

ಭೂಮಾಪಕರು ನೀಡಿದ ಹಿಂಬರಹವನ್ನು ನಿಪಿ.50 ಎಂದು, ಫಾರಂ ನಂ.12 ಅನ್ನು ನಿಪಿ.51 ಎಂದು ಗುರುತಿಸಲಾಯಿತು.

ಹಕ್ಕು ಖುಲಾಸೆ ಪತ್ರದ ಆಧಾರದ ಮೇಲೆ ಖಾತಾ ನಂ 34 ರ ಖಾತೆಯನ್ನು ಶಂಭುಲಿಂಗಪ್ಪರವರ ಹೆಸರಿಗೆ ಮಾಡಿರುತ್ತೇನೆ. ಖಾತಾ ನಂ 35 ಮೊದಲು ಮಂಜುನಾಥರವರ ಹೆಸರಿನಲ್ಲಿತ್ತು, ಸದರಿಯವರು ತೀರಿಕೊಂಡಿದ್ದಕ್ಕೆ ಆಸ್ತಿಯ ಖಾತೆಯನ್ನು ವನಿತಾ ರವರ ಹೆಸರಿಗೆ ಮಾಡಲಾಗಿದೆ.

**ಪಾಟೀ ಸವಾಲು ಪ್ರತಿವಾದಿ ನಂ.1 ಹಾಗೂ 2(ಎ) ರವರ ಶ್ರೀ ಕೆ.ಕೆ.ಆರ್. ವಕೀಲರಿಂದ**

ಕರ ನಿರ್ಧರಣಾ ಪತ್ರವನ್ನು ಯಾವ ಉದ್ದೇಶಕ್ಕಾಗಿ ಪಡೆದುಕೊಳ್ಳುತ್ತೀರಿ ಎಂದರೆ ಸಾಕ್ಷಿ ತೆರಿಗೆ ಪಡೆಯುವ ಸಲುವಾಗಿ ಪಡೆದುಕೊಳ್ಳುತ್ತೇನೆ ಎಂದು ನುಡಿಯುತ್ತಾರೆ. ಕರ ನಿರ್ಧರಣಾ ಪ್ರಪತ್ರವನ್ನು ಮಾಲೀಕತ್ವದ ಆಧಾರದ ಮೇಲೆ ಮಾಡುತ್ತೀರೋ ಅಥವಾ ಕೇವಲ ಕರ ನಿರ್ಧರಣೆಗಾಗಿ ಮಾತ್ರ ಮಾಡುತ್ತೀರೋ ಎಂದರೆ ಸಾಕ್ಷಿ ಕರ ನಿರ್ಧರಣೆಗಾಗಿ ಮಾಡುತ್ತೇವೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಒಂದು ವೇಳೆ ಪಹಣಿಯಲ್ಲಿ ಹೆಸರಿದ್ದು, ಫಾರಂ ನಂ.11ಬಿ ಮಾಡಲು ಅವಕಾಶವಿದ್ದು, ಅಂತಹ ಸಂದರ್ಭಗಳಲ್ಲಿ ಪಹಣಿಯಲ್ಲಿ ಇದ್ದವರ ಹೆಸರಿಗೆ ಇ-ಸ್ವತ್ತು ಮಾಡಿಕೊಡುತ್ತೇವೆ ಎಂದು ನುಡಿಯುತ್ತಾರೆ. ಫಾರಂ ನಂ.11ಬಿ ಯಲ್ಲಿ ಇ-ಸ್ವತ್ತಿನ ಖಾತೆಯನ್ನು ಮಾಡಲು ಪಹಣಿಯ ಜೊತೆಗೆ ನೀವು ಯಾವುದಾದರೂ ರಿಜಿಸ್ಟರ್ಡ್ ಡಾಕ್ಯುಮೆಂಟ್ ಅನ್ನು ಪಡೆದುಕೊಳ್ಳಬೇಕಾಗುತ್ತದೆಎಂದರೆ ಸಾಕ್ಷಿ ಇ-ಸ್ವತ್ತು ಮಾಡುವಾಗ ಕೆಲವೊಂದು ದಾಖಲಾತಿಗಳನ್ನು ಕೇಳಿದ್ದು, ಅವುಗಳಲ್ಲಿ ಪಹಣಿ ಒಂದು ಸೆಲೆಕ್ಟ್ ಮಾಡಿದರೆ ಇ-ಸ್ವತ್ತು ಆಗುತ್ತದೆ ಎಂದು ನುಡಿಯುತ್ತಾರೆ.

ಖಾತಾ ನಂ. 35 ಸ.ನಂ.1/2 ರಲ್ಲಿಯ ಒಂದು ಎಕರೆ ಸ್ವತ್ತಿನಲ್ಲಿದೆ ಎಂದರೆ ಸರಿ. ಸ.ನಂ.1/2 ರಲ್ಲಿಯ ಒದು ಎಕರೆ ಸ್ವತ್ತು 1ನೇ ಪ್ರತಿವಾದಿಗೆ ಶುದ್ಧ ಕ್ರಯ ಪತ್ರದ ಮೂಲಕ ಬಂದಿರುತ್ತದೆ ಎಂದರೆ ಗೊತ್ತಿಲ್ಲ. ಖಾತೆ ನಂ.35 ಕ್ಕೆ ಸಂಬಂಧಿಸಿದಂತೆ ಮೃತ ಮಂಜುನಾಥ್ ರವರ ಹೆಸರಿಗೆ ಕರ ನಿರ್ದರಣಾ ಅನುಬಂಧ 1 ಮಾಡುವಾಗ ಗೌರಮ್ಮರವರ ಕಡೆಯಿಂದ ನಾವು ಯಾವುದೇ ನೊಂದಣಿ ಪತ್ರಗಳನ್ನು ಪಡೆದುಕೊಂಡಿಲ್ಲ ಎಂದರೆ ಸಾಕ್ಷಿ ಆ ಸಮಯಕ್ಕೆ ನಾನು ಇರಲಿಲ್ಲ, ಹೀಗಾಗಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮೃತ ಮಂಜುನಾಥ್ ರವರ ಹೆಸರಿಗೆ ಬಂದಿರುವ ನಿಪಿ-44ರ ಕರ ನಿರ್ದರಣಾ ಅನುಬಂಧ 1 ದಾಖಲಾತಿ ಕಾನೂನು ಬಾಹಿರವಾಗಿದೆ ಎಂದರೆ ಸರಿಯಲ್ಲ. ನಿಪಿ.44 ರ ದಾಖಲಾತಿಯನ್ನು ಕೇವಲ ಮರಣ ಪ್ರಮಾಣ ಪತ್ರದ ಆಧಾರದ ಮೇಲೆ ಮಾತ್ರ ಮಾಡಿರುತ್ತೇವೆ ಎಂದರೆ ಸಾಕ್ಷಿ ನಾನು ಮಾಡಿಲ್ಲ ಎಂದು ನುಡಿಯುತ್ತಾರೆ. ನಿಪಿ.44 ಮತ್ತು 45 ರ ದಾಖಲಾತಿಗಳು ಯಾವುದೇ ಹಕ್ಕು ವರ್ಗಾವಣೆ ದಾಖಲಾತಿಗಳಿಲ್ಲದೇ ಮಾಡಿಕೊಂಡಿದ್ದೇವೆ ಎಂದರೆ ಸಾಕ್ಷಿ ಆ ಸಮಯದಲ್ಲಿ ನಾನು ಇರಲಿಲ್ಲ, ಹೀಗಾಗಿ ಯಾವ ದಾಖಲಾತಿಗಳ ಆಧಾರದ ಮೇಲೆ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಖಾತಾ ನಂ.35 1ನೇ ಪ್ರತಿವಾದಿಗೆ ಸೇರಿದ ಸ್ವತ್ತಾಗಿದ್ದು, ನಾನು ವನಿತಾ ರವರೊಂದಿಗೆ ಷರೀಕ್ಕಾಗಿ ಸದರಿ ಖಾತೆಯನ್ನು ವನಿತ ರವರ ಹೆಸರಿಗೆ ವರ್ಗಾವಣೆ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 10 ನೇ ಪ್ರತಿವಾದಿ ರವರ ಪರ ಶ್ರೀ ಎ.ಎಸ್. ವಕೀಲರಿಂದ**

ಖಾತೆ ಬದಲಾವಣೆಗಳು ಆದಾಗ ನಾನು ಸದರಿ ಗ್ರಾಮ ಪಂಚಾಯಿತಿಯ ಪಿ ಡಿ ಓ ಆಗಿರಲಿಲ್ಲ. 2006ನೇ ಇಸವಿಯಲ್ಲಿ ಕ್ಯಾತನಹಳ್ಳಿ ಗ್ರಾಮ ಪಂಚಾಯಿತಿಯ ಪಿ ಡಿ ಓ ಎಂದು ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರುಗಳಲ್ಲಿಯ ಮನೆಗಳಿಗೆ

ಸಂಬಧಪಟ್ಟಂತೆ ಫಾರಂ ನಂ.11ಬಿ ಕೊಡುವಾಗ ಪಹಣಿಗಳನ್ನು ನಾವು ಪಡೆದುಕೊಳ್ಳುತ್ತೇವೆ. ಫಾರಂ ನಂ.11ಬಿಯನ್ನು ಖಾತಾ ನಂ.34 ಕ್ಕೆ ಸಂಬಂಧಪಟ್ಟಂತೆ ಕೊಟ್ಟಿರುತ್ತಾರೆ. ಖಾತಾ ನಂ.34 ಯಾವ ಸರ್ವೆ ನಂಬರ್ ನಲ್ಲಿ ಇದೆ ಎಂದರೆ ಸಾಕ್ಷಿ ಹಿಂದಿನ ಪಿ.ಡಿ.ಓ ರವರು ಪಹಣಿ ಪಡೆದುಕೊಳ್ಳದೇ ಫಾರಂ ನಂ.11ಬಿಯನ್ನು ಕೊಟ್ಟಿದ್ದರಿಂದ ಸದರಿ ಖಾತೆ ನಂ.34 ಯಾವ ಸರ್ವೆ ನಂಬರ್ ನಲ್ಲಿ ಬರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಫಾರಂ ನಂ.11ಬಿ ನೀಡುವಾಗ ಗ್ರಾಮ ಠಾಣಾ ನಕ್ಷೆಯನ್ನು ತೆಗೆದುಕೊಂಡಿಲ್ಲ. ಸಾಕ್ಷಿ ಮುಂದುವರೆದು ಭೂ ಮಾಪನ ಇಲಾಖೆಯವರು ಅಸ್ತಿಯು ಗ್ರಾಮ ಠಾಣೆಯ ಹೊರಗಡೆ ಬರುತ್ತದೆ ಎಂದು ಹಿಂಬರಹ ಕೊಟ್ಟಿದ್ದರಿಂದ ಪಡೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ನಿಪಿ.51 ರಲ್ಲಿ ಆಸ್ತಿಯ ಸ್ವಾಧೀನತೆ ಪಿತ್ರಾರ್ಜಿತ ಎಂದು ಬರೆಯಲಾಗಿದೆ ಎಂದರೆ ಸರಿ.

ನಿಪಿ.51 ರಂತಹ ಫಾರಂ ನಂ.12 ನೇಯದ್ದನ್ನು ಜನರೇಟ್ ಮಾಡುವಾಗ ಆಸ್ತಿಯು ಪಿತ್ರಾರ್ಜಿತ ಎಂದು ಹೇಳಿದಾಗ ಅದಕ್ಕೆ ಸಂಬಂಧಪಟ್ಟಂತೆ ವಂಶವೃಕ್ಷ, ಒಂದು ವೇಳೆ ವಿಭಾಗವಾಗಿದ್ದರೆ ವಿಭಾಗ ಪತ್ರ ಮತ್ತು ಇತರೆ ದಾಖಲಾತಿಗಳನ್ನು ಪಡೆದುಕೊಳ್ಳುತ್ತೇವೆ ಎಂದರೆ ಸರಿ. ಅರ್ಜಿ ಕೊಟ್ಟವರೇ ಫಾರಂ ನಂ.12ಗೆ ಸಹಿ ಮಾಡುತ್ತಾರೆ ಎಂದರೆ ಸರಿ. ಈ ಪ್ರಕರಣದಲ್ಲಿ ಅರ್ಜಿದಾರರು ಕೆ.ವಿ.ಶಂಭುಲಿಂಗಪ್ಪರವರೇ ಆಗಿದ್ದರು ಎಂದರೆ ಸರಿ. ಪಿತ್ರಾರ್ಜಿತ ಆಸ್ತಿಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ನಾನು ಹಾಜರುಪಡಿಸದೇ ಅವುಗಳನ್ನು ಮುಚ್ಚಿಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನನಗೆ ದಾಖಲಾತಿಗಳನ್ನು ಹಾಜರುಪಡಿಸಲು ಮಾತ್ರ ಮಾಹಿತಿ ಇದ್ದು, ಉಳಿದುದ್ದರ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಿಪಿ.37ರ ಪ್ರಕಾರ ಒಟ್ಟು 7 ಜನ ಕುಟುಂಬದ ಸಧ್ಯರಿದ್ದಾರೆ ಎದರೆ ಸರಿ.

ಖಾತೆ ಮಾಡುವ ಸಮಯದಲ್ಲಿ ನಿಪಿ.37 ರಲ್ಲಿ ಹೇಳಿರುವ ಎಲ್ಲರ ಒಪ್ಪಿಗೆ ಪತ್ರಗಳು ಇಲ್ಲ ಎಂದರೆ ಸಾಕ್ಷಿ ಆಸ್ತಿ ಕೇವಲ ಗೌರಮ್ಮರವರ ಹೆಸರಿನಲ್ಲಿ ಮಾತ್ರ ಇತ್ತು, ಹೀಗಾಗಿ ಅವರು ಒಬ್ಬರಿಂದಲೇ ಮಾತ್ರ ಹಕ್ಕು ಖುಲಾಸೆ ಪತ್ರ ಪಡೆದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ನಮ್ಮ ಕಚೇರಿಯಲ್ಲಿಯ ದಾಖಲಾತಿಗಳನ್ನು ಅವಲೋಕನ ಮಾಡಿದಾಗ ಗೌರಮ್ಮರವರಿಗೆ ಸದರಿ ಆಸ್ತಿ ಹೇಗೆ ಬಂತು ಎಂದು ನಮೂದು ಇರುವುದಿಲ್ಲ ಎಂದರೆ ಸರಿ. ಶಂಭುಲಿಂಗಪ್ಪರವರೇ ಪಿತ್ರಾರ್ಜಿತ ಆಸ್ತಿಯಲ್ಲಿ ಕೇಳಿಕೊಂಡಿದ್ದರಿಂದ ನಾವು ಕುಟುಂಬದ ಸದಸ್ಯರ ಒಪ್ಪಿಗೆ ಪತ್ರವನ್ನು ಪಡೆಯಬೇಕಾಗಿತ್ತು ಎಂದರೆ ಸರಿಯಲ್ಲ.

ಖಾತೆ ನಂ.35 ಜಮೀನಿನಲ್ಲಿರುವ ಮನೆಯಾಗಿದ್ದು, ಅದೂ ಸಹಾ ಫಾರಂ 11ಬಿ ಗೆ ಒಳಪಟ್ಟಿದೆ. ಈ ಹಿಂದೆ ಮಂಜುನಾಥ್ ರವರ ಹೆಸರಿಗೆ ಖಾತೆ ನಂ.35 ಅನ್ನು ಖಾತೆ ಮಾಡುವ ಸಮಯಲ್ಲಿ ವಿಭಾಗ ಪತ್ರ ಅಥವಾ ಪಾಲು ಪಾರಿಕತ್ ದಾಖಲಾತಿಗಳು ಇಲಿಲ್ಲ. ನಿಪಿ.44 ಕ್ಕೆ 1ನೇ ಪ್ರತಿವಾದಿಯ ಸಹಿಯನ್ನು ಯಾವ ಕಾರಣಕ್ಕಾಗಿ ಪಡೆದುಕೊಂಡಿರುತ್ತೀರಿ ಎಂದರೆ ಸಾಕ್ಷಿ ಅವರೇ ಆ ಮನೆಯಲ್ಲಿ ಇದ್ದುದ್ದರಿಂದ ಅವರ ಸಹಿ ಪಡೆದಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ.44 2003-2004 ಕ್ಕೆ ಸಂಬಂದಪಟ್ಟದ್ದು ಇರುತ್ತದೆ. ನಿಪಿ.44 ಆಗುವ ಸಮಯದಲ್ಲಿ ಸರ್ವೆ ಆಗಿತ್ತು. ಸರ್ವೆ ಆದ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಮ್ಮ ಕಚೇರಿಯ ದಾಖಲಾತಿಗಳಲ್ಲಿ ಸರ್ವೆಗೆ ಸಂಬಂಧಪಟ್ಟಂತೆ ದಾಖಲಾತಿಗಳು ಇಲ್ಲ. ಮಂಜುನಾಥ್ ರವರಿಗೆ ಯಾವ ಆಧಾರದ ಮೇಲೆ ಖಾತೆಯಾಗಿದೆ ಎಂದು ತೋರಿಸಲು ನಮ್ಮ ಕಚೇರಿಯಲ್ಲಿ ದಾಖಲಾತಿಗಳು ಇಲ್ಲ. ನಾನು ದಾಖಲಾತಿಗಳು ಆದಾಗ ನಾನು ಆ ಗ್ರಾಮ ಪಂಚಾಯಿತಿಯಲ್ಲಿ ಕರ್ತವ ನಿರ್ವಹಿಸುತ್ತಿರಲಿಲ್ಲ, ಹೀಗಾಗಿ ಕೇವಲ ದಾಖಲಾತಿಗಳನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಲು ಮಾತ್ರ ನನಗೆ ಮಾಹಿತಿ ಇದ್ದು, ಉಳಿದಂತೆ ಯಾವುದೇ ಮಾಹಿತಿ ಇಲ್ಲ, ಅಲ್ಲದೇ ಆ ಸಮಯಕ್ಕೆ ಇದ್ದಂತಹ ಪಿ ಡಿ ಓ ರವರ ಹೆಸರು ಹೇಳಿದರೆ ನ್ಯಾಯಾಲಯಕ್ಕೆ ನಿಜಾಂಶ ಗೊತ್ತಾಗುತ್ತದೆ ಎನ್ನುವ ಉದ್ದೇಶದಿಂದ ನಾನು ಸತ್ಯಾಂಶಗಳನ್ನು ಮುಚಿಡುತ್ತಿ ದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.